# ಉಪ ತಹಶೀಲ್ದಾರರು ನಾಡಕಾರ್ಯಾಲಯ ತೆಕ್ಕಲಕೋಟೆ ಇವರ ನ್ಯಾಯಾಲಯದಲ್ಲಿ

**ವಾದಿಗಳು**
ಹೊಳಗುಂದಿ ಹನುಮಂತಪ್ಪ
ತಂದೆ ದಿ: ಓಬಳಪ್ಪ
ಸಿರಿಗೇರಿ ಗ್ರಾಮ

**ಪ್ರತಿವಾದಿಗಳು**
ಜೆ.ವೀರೇಶಗೌಡ
ತಂದೆ ಜೆ.ಮಹಾಲಿಂಗನಗೌಡ
ಸಿರಿಗೇರಿ ಗ್ರಾಮ.

| ಕ್ರ. ಸಂ. | ತಾಲೂಕು | ಹೋಬಳಿ | ಗ್ರಾಮ | ಸರ್ವೆ ನಂ. | ವಿಸ್ತೀರ್ಣ | ತಹರೆ |
|---|---|---|---|---|---|---|
| 1. | ಸಿರುಗುಪ್ಪ | ತೆಕ್ಕಲಕೋಟೆ | ಸಿರಿಗೇರಿ | **130A** | **3-49** | -- |

ಪೀಠಿಕೆ:-

ಸಿರುಗುಪ್ಪ ತಾಲೂಕು, ತೆಕ್ಕಲಕೋಟೆ ಹೋಬಳಿ, ಸಿರಿಗೇರಿ ಗ್ರಾಮದ ಮೇಲ್ಕಾಣಿಸಿದ ಜಮೀನಿನ ಹಕ್ಕು ಬದಲಾವಣೆಗೆ ಸಂಬಂಧಿಸಿದಂತೆ ಡಾಕುಮೆಂಟ್ ನಂ:2932/2015-16 ದಿ:28-07-2015ರ ಪ್ರಕಾರ ಎಸ್.ಮೆಹಬೂಬ್ ಬಾಷಾ ತಂದೆ: ಎಸ್.ಶೇಕ್ಷಾವಲಿ ಇವರಿಂದ ಶ್ರೀ ಜೆ.ವೀರೇಶಗೌಡ ತಂದೆ: ಜೆ.ಮಹಾಲಿಂಗನಗೌಡ ಇವರಿಗೆ ಕ್ರಯ ನೊಂದಾವಣೆಯಾದ ದಸ್ತಾವೇಜು ತಾಲೂಕು ಕಛೇರಿ ಸಿರುಗುಪ್ಪ ಭೂಮಿ ಕೇಂದ್ರದಲ್ಲಿ ದಿನಾಂಕ:28-07-2015ರಂದು ಸ್ವೀಕೃತವಾಗಿ ದಿ:29-07-2015ರಂದು ನಮೂನೆ-21 ನೋಟೀಸ್ ತಯಾರಿಸಿ ಹಕ್ಕುಬದಲಾವಣೆಗೆ ಪ್ರಕ್ರಿಯೆ ಜರುಗಿಸಲು ಕಂದಾಯ ನೀರಿಕ್ಷಕರು ತೆಕ್ಕಲಕೋಟೆ ಇವರಿಗೆ ಕಳುಹಿಸಕೊಡಲಾಗಿ ಗ್ರಾಮದಲ್ಲಿ ನಮೂನೆ-21 ನೋಟೀಸ್ ಜಾರಿ ಮಾಡಿರುವ ಸಮಯದಲ್ಲಿ ನಿಗದಿತ ಅವಧಿಯೊಳಗಾಗಿ ಆಸಕ್ತಿ ಉಳ್ಳವರಿಂದ ಆಕ್ಷೇಪಣೆ ಸ್ವೀಕೃತವಾಗಿರುವುದರಿಂದ ಈ ಕಾರ್ಯಾಲಯಕ್ಕೆ ಸದ್ರಿ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಕಡತವನ್ನು ಈ ಕಾರ್ಯಾಲಯದ ವಿವಾದಾಸ್ಪದ ವಹಿಯಲ್ಲಿ ನಮೂದಿಸಿಕೊಂಡು ಕರ್ನಾಟಕ ಭೂ ಕಂದಾಯ ಕಾಯ್ದೆ ನಿಯಮಗಳು 1966 ನಿಯಮ 43 ಮತ್ತು 67 ರಂತೆ ವಿಚಾರಣೆ ದಿನಾಂಕ ನಿಗದಿಪಡಿಸಿ ವಾದಿ ಮತ್ತು ಪ್ರತಿವಾದಿಗಳಗೆ ವಿಚಾರಣೆ ನೋಟಿಸು ನೀಡಿ ವಿಚಾರಣೆ ಪ್ರಕ್ರಿಯೆ ಕೈಗೊಂಡು ವಿಚಾರಣೆಯನ್ನು ಮುಕ್ತಾಯ ಗೊಳಿಸಲಾಯಿತು.

ಸದ್ರಿ ವಿವಾದಾಸ್ಪದ ಪ್ರಕರಣದ ವಿಚಾರಣೆ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ವಾದಿಗಳು ಸದ್ರಿ ಜಮೀನು ನನ್ನ ಹೆಸರಿಗೆ ಎಸ್.ದೊಡ್ಡ ನಬೀಸಾಬ್ ತಂದೆ: ದಿ:ಖಾದರ್‌ಸಾಬ್ ನವರಿಂದ ವಿಕ್ರಯ ಕರಾರು ಪತ್ರವಾಗಿದ್ದು. ದಿನಾಂಕ:01-01-2000 ರಂದು ಮಾಡಿಕೊಂಡ ಕರಾರು ಪತ್ರ ಸಲ್ಲಿಸಿ ಆಕ್ಷೆಪಣೆ ಸಲ್ಲಿಸಿರುತ್ತಾರೆ. ವಿಚಾರಣೆ ಸಮಯದಲ್ಲಿ ಪ್ರತಿವಾದಿಗಳು ಸದ್ರಿ ಜಮೀನು ದಿನಾಂಕ:28-07-2015 ಡಾಕುವೆಂಟ್ ನಂಬರ್ 2932/15-16 ರ ಪ್ರಕಾರ ಎಸ್.ಮೆಹಬೂಬ್ ಬಾಷಾ ತಂದೆ: ಎಸ್.ಶೇಕ್ಷಾವಲಿ ಇವರಿಂದ ನಾನು ಕ್ರಯಕ್ಕೆ ಪಡೆಇರುತ್ತೇನೆ ಕಾರಣ ಕ್ರಯಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಪುಟ-2ಕ್ಕೆ

ಸದ್ರಿ ವಿವಾದಾಸ್ಪದ ಪ್ರಕರಣದ ವಿಚಾರಣೆ ಸಮಯದಲ್ಲಿ ಮೂಲ ಕಡತ ಹಾಗೂ ದಾಖಲೆಗಳನ್ನು ಪರಿಶೀಲಿಸಲಾಗಿ ಸದ್ರಿ ಪ್ರಕರಣವು ನೊಂದಾಯಿತ ದಸ್ತಾವೇಜು ಆಗಿರುತ್ತದೆ. ವಾದಿಗಳು ದಿನಾಂಕ: 01-01-2000 ರಂದು ಎಸ್.ದೊಡ್ಡ ನಬೀಸಾಬ್ ತಂದೆ: ದಿ:ಖಾದರ್‌ಸಾಬ್ ಇವರು ಮಾಡಿಕೊಟ್ಟಿರುವ ವಿಕ್ರಯ ಕರಾರು ಪತ್ರ ಸಲ್ಲಿಸಿರುತ್ತಾರೆ. ಆದರೆ ಸದ್ರಿ ವಿಕ್ರಯ ಕರಾರು ಪತ್ರವು ನೊಂದಾವಣಿ ಅಗಿರುವುದಿಲ್ಲ ವಾದಿಗಳು ತಮ್ಮ ತಕರಾರನ್ನು ಪುಷ್ಟೀಕರಿಸುವಲ್ಲಿ ಅಗತ್ಯವಿರುವ ದಾಖಲೆಗಳನ್ನು ಸಲ್ಲಿಸುವಲ್ಲಿ ವಿಫಲವಾಗಿರುತ್ತಾರೆ. ಹಾಗೂ ಯಾವುದೇ ಒಂದು ನೊಂದಾಯಿತ ದಸ್ತಾವೇಜನ್ನು ತಿರಸ್ಕರಿಸುವ ಮತ್ತು ಗೈರು ಮಂಜೂರು ಮಾಡುವ ಅಧಿಕಾರವು ಭಾರತೀಯ ನೊಂದಾವಣೆ ಅಧಿನಿಯಮ ಕಾಯ್ದೆ 1908 ಕಲಂ 17ರ ಪ್ರಕಾರ ಈ ಕಾರ್ಯಾಲಯದ ವ್ಯಾಪ್ತಿಯಲ್ಲಿ ಒಳಪಡದಿರುವುದಿಲ್ಲವಾದ್ದರಿಂದ ಹಾಗೂ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 128 ಮತ್ತು 129ರ ಪ್ರಕಾರ ಕ್ರಮ ಕೈಗೊಳ್ಳುವ ಅವಶ್ಯಕತೆ ಇರುವುದರಿಂದ ಈ ಕೆಳಗಿನಂತೆ.

ಸಂ/ಕಂ/ಹ.ಬ/ವಿವಾದ/54/2015-16 ದಿನಾಂಕ: 10-05-2016

-:**<u>ಆದೇಶ</u>**:-

ಪೀಠಿಕೆಯಲ್ಲಿ ವಿವರಿಸಿದ ಹಿನ್ನಲೆಯಲ್ಲಿ ಹಾಗೂ ದಾಖಲೆಗಳ ಆಧಾರದನ್ವಯ ಸಿರುಗುಪ್ಪ ತಾಲ್ಲೂಕು, ತೆಕ್ಕಲಕೋಟೆ ಹೋಬಳಿ, ಸಿರಿಗೇರಿ ಗ್ರಾಮದ ಸರ್ವೆ ನಂ:130A ವಿ:3-49ಎಕರೆ ಜಮೀನನ್ನು ಡಾಕುಮೆಂಟ್ ನಂಬರ್:2932/15-16 ದಿನಾಂಕ:28-07-2015ರ ಪ್ರಕಾರ ವಿಕ್ರಯದಾರರ ಹೆಸರನ್ನು ಕಡಿಮೆ ಮಾಡಿ ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಸದ್ರಿ ಆದೇಶವನ್ನು ಬೆರಳಚ್ಚು ಮಾಡಿಸಿ ಓದಿ ತಪ್ಪುಗಳನ್ನು ತಿದ್ದಿ ದಿನಾಂಕ: 10-05-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಲಾಯಿತು.

ಉಪ ತಹಶೀಲ್ದಾರರು
ನಾಡ ಕಾರ್ಯಾಲಯ
ತೆಕ್ಕಲಕೋಟೆ

ಪ್ರತಿಯನ್ನು:-
1)ವಾದಿ ಮತ್ತು ಪ್ರತಿವಾದಿಗಳಗೆ
2) ಭೂಮಿ ಕೇಂದ್ರ ತಾಲೂಕು ಕಛೇರಿಗೆ.